Regd No B 155

24-11-1969

SATYAVADI Daily, MYSORE 4 ★★ 53 rd Year of Publication

శ్రీ సత్యనారాయణ
బెనిఫిట్ స్కీం
(చాముండేశ్వరి టాకీస్ కట్టడ)
203, సయ్యాజిరావ్ రస్తే,
మైసూరు-1
మేల్కండ యోజనేగే
ఇందే చందాదారరాగిరి.
అదర ఫలవన్ను పడెయిరి

Golden
Jubilee
Celebrated
Paper

స్థాపకరు: ఆరమనె శివరుద్రేదార్ ఎం. వి. సుబ్బరావ్ సంపాదక : ధర్మప్రచారనిరత ఎం. ఎస్. కృష్ణరావ్ [2 పైసె

ಇಂದಿರಾ ಸರ್ಕಾರ ಎದುರಿಸುವುದಾಗಿ ಶ್ರೀಮತಿ ಸಿಹರ ಹೇಳಿಕೆ

ಚಂದ್ರಂಪಳ್ಳಿ ಪ್ರಾಜೆಕ್ಟ್

ಗುಲ್ಬರ್ಗ— ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಕೃಷ್ಣಾನದಿ ಚಂದ್ರಂಪಳ್ಳಿ ಪ್ರಾಜೆಕ್ಟನ್ನು ಉದ್ಘಾಟಿಸಿ, ಬೆಲ್ಲವನ್ನುತ್ತು ಎಡದಡದ ನಾಲೆಗಳಲ್ಲಿ ನೀರನ್ನು ಬಿಟ್ಟರು.

●

ಟ್ರಾಕ್ಟರುಗಳ ಆಮದು

ನವದೆಹಲಿ — ಜೆಕೊಸ್ಲೊವೇಕಿಯಾದಿಂದ ರೂ 10 ಕೋಟಿ ಬೆಲೆಯ 7000 ಟ್ರಾಕ್ಟರುಗಳನ್ನು ಆಮದುಮಾಡಿಕೊಳ್ಳುವ ಒಪ್ಪಂದಕ್ಕೆ ರುಜುವಾಯಿತು.

★

ಚೀಣಾದ ಅನುಮತಿ ತಿರಸ್ಕಾರ

ಖಾಟ್ಮಂಡು— ಎವರೆಸ್ಟ್ ಹತ್ತಿದ ವೀರ ಎಡ್ಮಂಡ್ ಹಿಲಾರಿ ಟಿಬೆಟ್ಟಿಗೆ ಭೇಟಿ ಕೊಡಲು ಚೀಣಾ ಅನುಮತಿ ತಿರಸ್ಕರಿಸಿದೆ.

★

ಚಿತ್ರಗಳ ಕಳವು

ನ್ಯೂಯಾರ್ಕ್— ಇಲ್ಲಿಯ ಒಂದು ಕಲಾ ಪ್ರದರ್ಶನಶಾಲೆಯಲ್ಲಿ ರೂ. 5 ಲಕ್ಷ ಬೆಲೆಯ 7 ವರ್ಣಚಿತ್ರಗಳು ಕಳುವಾಗಿದೆ.

●

ಪೌರಸಭೆ

ಮೈಸೂರು— ಈ ಮಾಹೆಯ ಪುರಸಭಾಧಿವೇಶನವು ತಾ॥ 29 ನೇ ಶನಿವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದಾಗಿದೆ.

★

ಆರ್ ಎಸ್ ಎಸ್ ಕಾವಲು

ನವದೆಹಲಿ— ಜಂತರ ಮಂತರ ರಸ್ತೆಯಲ್ಲಿನ ಏ ಐ ಸಿ ಸಿ ಕಚೇರಿಯನ್ನು 'ಸಿಂಡಿಕೇಟ್' ನ್ಯಾಯಬಾಹಿರವಾಗಿ ಆಕ್ರಮಿಸಿರುವದಕ್ಕೆ ಆರ್ ಎಸ್ ಎಸ್ ನೆರವನ್ನು ಪಡೆಯಲಾಗಿದೆಯೆಂದು ಶ್ರೀ ಶಶಿಭೂಷಣರು ಆಪಾದಿಸಿರುವರು.

ಬೆಳಗಾಂ ಕೇಳಬೇಡಿ

ಬೆಂಗಳೂರು— ಫ್ರೂನಾದಲ್ಲಿರುವ ಭಾರತದ ವ್ಯಾಸಂಗದ ತೌನೇರಿಕಾ ಸಂಸ್ಥೆಯ ಡಾ॥ ಡಿ ಡಿ ಕರ್ವಿಯವರು, ಮಹಾರಾಷ್ಟ್ರೀಯರು ಬೆಳಗಾಂ ಕೇಳಿಕೆಯನ್ನು ಬಿಟ್ಟುಬಿಡಬೇಕೆಂದು "ಮರಾಟಾ" ಪತ್ರಿಕೆಯ 1969 ನೇ ವಾರ್ಷಿಕ ಸಂಚಿಕೆಯಲ್ಲಿ ಬರೆದಿರುವ ಲೇಖನದಲ್ಲಿ ತಿಳಿಸಿರುವರು.

●

ಕಾಂಗ್ರೆಸ್ ಮಹಾಧಿವೇಶನ

ನವದೆಹಲಿ— ಈಗ ತಾನೇ ಡೆಲ್ಲಿಯಲ್ಲಿ ನಡೆದ ಏ ಐ ಸಿ ಸಿ ವಿಾಟಿಂಗಿನಲ್ಲಿ ಮಾಡಲ್ಪಟ್ಟ ನಿರ್ಣಯಗಳನ್ನು ವ್ಯತಿರಿಕ್ತಗೊಳಿಸಲು ಶ್ರೀ ನಿಜಲಿಂಗಪ್ಪನವರ ಆಡಳಿತದ ಕಾಂಗ್ರೆಸ್ ಪಾರ್ಟಿಯು ಕಾಂಗ್ರೆಸ್ ಮಹಾಧಿವೇಶನವನ್ನು ಕರೆಯಲು ನಿರ್ಧರಿಸಿದೆ.

★

ಎಂ ಪಿ ಸಿ ಸಿ

ಬೆಂಗಳೂರು—ಏಐಸಿಸಿ ಕಾರ್ಯ ಸಮಿತಿ ಸ್ಪೆಷಲ್ ವಿಾಟಿಂಗು ತಾತ್ಕಾಲಿಕ ಪರಿಸ್ಥಿತಿಯನ್ನು ಪರಿಶೀಲಿಸಲು ನವೆಂಬರು 28ರಂದು ನಡೆಯುವುದಾಗಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು — ಡೆಲ್ಲಿ ಏಐಸಿಸಿ ಬಗ್ಗೆ ಟೀಕಿಸಿ, ಅದ್ದೂ ಚರ್ಚಿಸಲಾಗುವದೆಂದರು.

★

ದೇಶಭಕ್ತಿ

ನವದೆಹಲಿ— ಏ ಐ ಸಿ ಸಿ ಯಲ್ಲಿ ಸುಪ್ರಸಿದ್ಧ ಚಲಚಿತ್ರ ಸಂಗೀತಗಾರ ಶ್ರೀ ಪ್ರೇಮ ದುರ್ವಾ ರಚಿಸಿ ಹಾಡಿದ್ದು —

ಖುದ್ ಜಿಯೊ ಔರೋಂ ಕೊ ಭಿ ಜೀನೆದೊ
ಯೆ ಹಿ ತು ಹೈ ಜಿಂದ್ಗಿ ಕಾ ರಸ್ತಾ
ಯೆ ಹಿ ಲಿಖಾ ಹೈ ಗೀತಾ ಔರ್
ಕುರಾ ಮೇ
ಯೆ ಹಿ ಬನಿ ಹೈ ನಾನಕ್ ಔರ್ ಕಬೀರ್

900 ಜೊತೆ ಜೋಡು ಒರಸಿದರು

ನವದೆಹಲಿ— ಏಐಸಿಸಿ ಅಧಿವೇಶನಕ್ಕೆ ಬಂದಿದ್ದ ಕಾಂಗೆಸಿಗರ 900 ಜೊತೆ ಜೊತೆ ಜೋಡುಗಳನ್ನು 4 ಮಂದಿ ಜೋಡು ಪಾಲಿಷ್ ಮಾಡುವ ಹುಡುಗರು ಉಚಿತವಾಗಿ ಜೆನ್ನಾಗಿ ಒರಿಸಿ ಪಾಲಿಷ್ ಮಾಡಿದರು — ಇದು ಕಾಂಗ್ರೆಸ್ಸಿಗೆ ತಮ್ಮ ಸೇವೆ ಎಂದು ಹೇಳಿದರು.

○

ಸಿನ್ಹರ ಘರ್ಜನೆ

ಮದರಾಸು— ಇಲ್ಲಿ ಎರಡು ದಿನಗಳಿರಲು ಬಂದ ಶ್ರೀಮತಿ ತಾರಕೇಶ್ವರಿ ಸಿನ್ಹರು ಇಂದಿರಾರವರ ಸರಕಾರವನ್ನು ಕಾಂಗ್ರೆಸ್ ಎದುರಿಸುವುದೆಂದೂ, ಈಗ ಇಂದಿರಾರವರ ಅಧ್ಯಕ್ಷತೆಯಲ್ಲಿ ನಡದ ಏ ಐ ಸಿ ಸಿ ಸರಕಾರದ್ದಾಗಿದ್ದು, ಅವರ ಇದಕ್ಕಾಗಿ ತಮ್ಮ ಶಕ್ತಿ ಮತ್ತು ಅಧಿಕಾರವನ್ನೆಲ್ಲಾ ಉಪಯೋಗಿಸಿರುವರೆಂದು ಹೇಳಿದರು — ಶ್ರೀ ಸುಬ್ರಹ್ಮಣ್ಯಂರ ಹೊಸ ಕಾಂಗ್ರೆಸ್ ಎರಡು ವರ್ಷಗಳೂ ಉಳಿಯಲಾರದೆಂದರು.

★

ರೂ. 493934

ಬೊಂಬಾಯಿ— ರೂ 40 ಹಾಕಿದ ಒಂದೇ ಒಂದು ಟಿಕೇಟಿಗೆ ನಿನ್ನೆ ರೇಸಿನ್ ನಲ್ಲಿಯ ಜಾಕ್‌ಪಾಟ್‌ಪೂಲ್‌ನಲ್ಲಿ ರೂ. 493934 ದೊರೆಯಿತು.

ಗಡಿ ಸಮಸ್ಯೆಗೆ ಬಾಧಕವಿಲ್ಲ

ಗುಲ್ಬರ್ಗ— ಏನೇಆಗಲಿ, ಮೈಸೂರು ಗಡಿ ವ್ಯಾಜ್ಯದಲ್ಲಿ ಮಹಾಜನ ಆಯೋಗದ ಶಿಫಾರಸು ಬಿಟ್ಟು ಬೇರೆ ಯಾವುದನ್ನೂ ಒಪ್ಪುವುದಿಲ್ಲವೆಂದೂ, ಕಾಂಗ್ರೆಸ್ಸಿನಲ್ಲಿಯ ಈಗಿನ ಬಿಕ್ಕಟ್ಟು ಗಡಿವಿಷಯದಲ್ಲಿ ಏನೂ ಬಾಧಕವಿಲ್ಲವೆಂದೂ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

ಕಾಂಗ್ರೆಸ್ ಅಧ್ಯಕ್ಷತೆಯಿಂದ ವಜ

ನವದೆಹಲಿ— ಏ ಐ ಸಿ ಸಿ ಶ್ರೀ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷತೆಯಿಂದ ತೆಗೆದುಹಾಕಿತು — ಪ್ರಧಾನಿ ಇಂದಿರಾ, ಕೆಲವು ಕಾಂಗ್ರೆಸ್ ನಾಯಕರು, ಕೆಲವು ಪಾರ್ಲಿಮೆಂಟ ಸದಸ್ಯರ ಮೇಲೆ ನಿಜಲಿಂಗಪ್ಪನವರು ವಿಧಿಸಿದ್ದ ನಿಷೇಧವನ್ನು ರದ್ದುಪಡಿಸಲಾಯಿತು — ಇಂದಿರಾರು ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿರುವರೆಂದೂ, ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿ ನಾಯಕರಾಗಿರುವರೆಂದೂ ತರಾವು ಮಂಜೂರ್ಮಾಡಲಾಯಿತು.

○

ನವದೆಹಲಿ— ಈಗ ನಿಜಲಿಂಗಪ್ಪನವರ ಗುಂಪಿನ ಹತೋಟಿಯಲ್ಲಿರುವ ತಮಿಳುನಾಡು, ಮೈಸೂರು, ಗುಜರಾತಿನಲ್ಲಿ ಪ್ರತ್ಯೇಕ-ಹಂಗಾಮಿ ಪ್ರವೇಶ ಕಾಂಗ್ರೆಸ್ ಸಮಿತಿಗಳನ್ನು ಸ್ಥಾಪಿಸಲು ಹೊಸ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರವರು ಯೋಜಿಸಿರುವರು.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

(2)

ಹಿಂದೂ ನಾಯಕತ್ವ

ಡಚ್‌ರವರ ಆಡಳಿತದಲ್ಲಿರುವ ಸುರಿನಾಂನಲ್ಲಿ ಈಚಿನ ಸಾರ್ವಜನಿಕ ಚುನಾವಣೆಯಲ್ಲಿ ಶ್ರೀ ಜಗೇರನಾಸ್ತ್ ಲಕ್ಷ್ಮಣರವರ ನಾಯಕತ್ವದ ಹಿಂದೂಸ್ಥಾನಿ ಪಾರ್ಟಿಯು 39 ಸದಸ್ಯರ ಪಾರ್ಲಿಮೆಂಟಿನಲ್ಲಿ 18 ಸ್ಥಾನ ಪಡೆದಿದೆ ; ಪ್ರಧಾನಿಯಾಗಿದ್ದ ಜಾನ್ ಪೆಂಗಾಲರ ನ್ಯಾಷನಲ್ ಪಾರ್ಟಿಗೆ 12, ಜಾನ್ ಎಡೀಡರರ ಪ್ರೋಗ್ರೆಸಿವ್ ಪಾರ್ಟಿಗೆ 8, ಎಡ್ಡಿ ಬ್ರೂ ಮೇರರ ರಿಪಬ್ಲಿಕ್ ಪಾರ್ಟಿಗೆ 1 ಸ್ಥಾನ ಪ್ರೊರತಿದೆ.

ದೂರದ ಡಚ್ ಗಯಾನಾದಲ್ಲಿ, ಭಾರತದಿಂದ ಹೋಗಿ ನೆಲೆಸಿರುವ ನಮ್ಮ ಜನರು ಚುನಾವಣೆಯಲ್ಲಿ ಅದ್ಭುತ ವಿಜಯ ಪಡೆದಿರುವುದು ಆನಂದದಾಯಕವು.

ಶ್ರೀ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷತೆಯಿಂದ ತೆಗೆದುಹಾಕಲಾಯಿತು

ನವದೆಹಲಿ— ಶನಿವಾರ ಕರೆಯಲ್ಪಟ್ಟಿದ್ದ ಏ ಐ ಸಿ ಸಿ ವಿಶೇಷ ಅಧಿವೇಶನದಲ್ಲಿ ಇಂದಿರಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ನಿಜಲಿಂಗಪ್ಪನವರನ್ನು ಕಾಂಗ್ರೆಸ್ ಅಧ್ಯಕ್ಷತೆಯಿಂದ ತೆಗೆದೇ, ಶ್ರೀ ಸಿ. ಸುಬ್ರಹ್ಮಣ್ಯಂರನ್ನು ಮಧ್ಯವರ್ತಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು – ಶ್ರೀ ನಿಜಲಿಂಗಪ್ಪನವರ ಮೇಲೆ ಅವಿಶ್ವಾಸ ಮಂಜೂರಾಗಿಲಾಯಿತು – ಶ್ರೀ ಸುಬ್ರಹ್ಮಣ್ಯಂರು ಬೊಂಬಾಯಿನಲ್ಲಿ ಡಿಸೆಂಬರು 26, 27, 28 ರಂದು ನಡೆಸಲು ಯೋಜಿಸಿರುವ ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರ ಚುನಾವಣೆಯ ವರೆವಿಗೆ ಅಧ್ಯಕ್ಷರಾಗಿರುವರು – ಇವರು ತಮ್ಮ ಕಾರ್ಯಕಾರಿ ಸಮಿತಿಯನ್ನು (10 ಮಂದಿ ಚುನಾಯಿತ, 10 ಮಂದಿ ನಾಮಕರಣ ಸದಸ್ಯರು) ಏರ್ಪಡಿಸಿಕೊಳ್ಳುವರು.

SHAKTI
SUDHA

A Superb Tonic

ಪ್ರಮುಖ-ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾರಿ
ಕುಟುಂಬ ಯೋಜನೆ

ವುಡ್‌ಲಾಂಡ್

ಜಯಪ್ರದ 2ನೇ ವಾರ
ಶಿ ನಿ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಮ್ ಸಾಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯಾರ್
[ದಿನ 3 ಪ್ರದರ್ಶನಗಳು]

ಅಪೆರಾ— 21-11-69 ರಿಂದ
.... ಅತ್ಯಮೋಘ ತಮಿಳು ಚಿತ್ರ ....

ದೈವಮಗನ್

ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protectthe Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore